ಸೊಳ್ಳೆಗಳ ನಾಶಕ್ಕಾಗಿ ಔಷಧಿ ಸಿಂಪಡಿಸಲು ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡಿರುವ ಕ್ರಮಗಳು

1) ಎಲ್ಲಾ ಆರೋಗ್ಯ ವಾರ್ಡುಗಳಲ್ಲಿ ನೀರು ನಿಂತಿರುವ ಪ್ರದೇಶಗಳಲ್ಲಿ ಸೊಳ್ಳೆಯ ಲಾರ್ವ ನಾಶಕವಾದ ಲಾರ್ವಿ ಸೈಡ್ಸ್‌ಗಳನ್ನು ವಹಿಕಲ್ ಮೌಂಟೆಡ್ ಸ್ಪ್ರೇಯರ್‌ಗಳ ಮುಖಾಂತರ ಪ್ರತೀ ದಿವಸವು ನಿಗಧಿಪಡಿಸಿರುವ ಕಾರ್ಯಕ್ರಮದಂತೆ ಲಾರ್ವ ನಾಶಕಗಳನ್ನು ಸಿಂಪಡಿಸಲಾಗುತ್ತಿದೆ. ಹಾಗೂ ಕೈ ಪಂಪುಗಳ ಮೂಲಕ ನಿಗದಿತ ಕಾರ್ಯಕ್ರಮದಂತೆ ಕೀಟನಾಶಕ ಸಿಂಪಡಿಸಲಾಗುತ್ತಿದೆ.

2) ಮುಂದುವರಿದ ಸೊಳ್ಳೆಗಳ ನಾಶಕ್ಕಾಗಿ ನಗರ ಮಲೇರಿಯ ಯೋಜನೆಯಡಿಯಲ್ಲಿ ಸೊಳ್ಳೆ ಲಾರ್ವ ನಾಶಕವಾದ ಟಿಮಿಫಾಸ ಪಂತಿಯಾನ್‌ಗಳನ್ನು ಸಾಕಾಗುವಷ್ಟು ದಾಸ್ತಾನು ನೀಡಲಾಗಿದೆ.

ಬಾಲಕರ ಬಾಲಕಿಯರ ವಸತಿ ನಿಲಯಗಳು

220 ಶ್ರೀ ಪಾಟೀಲ್ ಎ.ಎಸ್.(ನಡಹಳ್ಳಿ) (ದೇವರ ಹಿಪ್ಪರಗಿ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬಿಜಾಪುರ ಜಿಲ್ಲೆ, ದೇವರಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕರ:ಬಾಲಕಿಯರ ವಸತಿ ನಿಲಯಗಳ ಸಂಖ್ಯೆ ಎಷ್ಟು (ವಿವರ ನೀಡುವುದು.)

(ಆ) ಈ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿಗಳ ವಸತಿ ನಿಲಯಗಳೆಷ್ಟು (ವಿವರ ನೀಡುವುದು)

(ಇ) ಪ್ರಸಕ್ತ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಮೆಟ್ರಿಕ್ ಪೂರ್ವ; ಮೆಟ್ರಿಕ್ ನಂತರ ವಿದ್ಯಾರ್ಥಿ ವಸತಿ ನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು)

ಶ್ರೀ ಡಿ. ಸುಧಾಕರ, ಸಮಾಜ ಕಲ್ಯಾಣ ಸಚಿವರು:–

(ಅ) **1. ಸಮಾಜ ಕಲ್ಯಾಣ ಇಲಾಖೆ** ಬಿಜಾಪುರ ಜಿಲ್ಲೆ, ದೇವರಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗಾಗಿ 11 ಬಾಲಕರ ಹಾಗೂ 2 ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿವೆ. ವಿವರ ಕೆಳಕಂಡಂತಿದೆ.

ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, 1) ದೇವರಹಿಪ್ಪರಗಿ 2) ದೇವರ ಮುಳಸಾವಲಗಿ 3) ಹಿಟ್ನಳ್ಳಿ ತಾಂಡಾ 4) ಬಿ.ಬಿ.ಹಿಂಗಳಗಿ 5) ಆಸ್ಕಿ 6) ಕಲಕೇರಿ 7) ಕೆ.ಸಾಲವಾಡಗಿ 8) ಜಯವಾಡಗಿ 9) ವಾಡವಾಡಗಿ 10) ನರಸಲಗಿ 11) ಕೊಡಗಾನೂರ

ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, 12) ಹಿಟ್ನಳ್ಳಿ ತಾಂಡಾ 13) ಜಲವಾಡಗಿ.

2. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ: ಬಿಜಾಪುರ ಜಿಲ್ಲೆ, ದೇವರಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ 8 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಕೆಳಕಂಡಂತಿದೆ.

(1) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ದೇವರಹಿಪ್ಪರಗಿ, ಸಿಂಧಗಿ ತಾಲ್ಲೂಕು

(2) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬಿಂಜಲಭಾವಿ, ಸಿಂಧಗಿ ತಾಲ್ಲೂಕು.

(3) ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಜಾಲವಾದ, ಸಿಂಧಗಿ ತಾಲ್ಲೂಕು.

(4) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನರಸಲಗಿ, ಬಸವನಬಾಗೇವಾಡಿ ತಾಲ್ಲೂಕು.

(5) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹೂವಿನ ಹಿಪ್ಪರಗಿ, ಬಸವನಬಾಗೇವಾಡಿ ತಾಲ್ಲೂಕು.

(6) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸಾಸನೂರ, ಬಸವನಬಾಗೇವಾಡಿ ತಾಲ್ಲೂಕು.

(7) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೈರವಾಡಗಿ, ಬಸವನಬಾಗೇವಾಡಿ ತಾಲ್ಲೂಕು

(8) ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ತುಂಬಗಿ, ಮುದ್ದೇಬಿಹಾಳ ತಾಲ್ಲೂಕು.

3. ಅಲ್ಪಸಂಖ್ಯಾತರ ಇಲಾಖೆ : ಬಿಜಾಪುರ ಜಿಲ್ಲೆ, ದೇವರಹಿಪ್ಪರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳಿರುವುದಿಲ್ಲ.

(ಆ) ಇರುವುದಿಲ್ಲ

(ಇ) ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಜಾತಿಯ 100 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಉಳಿದಂತೆ ಇನ್ನಾವುದೇ ವಿದ್ಯಾರ್ಥಿನಿಲಯ ತೆರೆಯುವ ಪ್ರಸ್ತಾವನೆ ಇರುವುದಿಲ್ಲ.

ಕಾರ್ಮಿಕ ಇಲಾಖೆ

173. ಮಾನ್ಯ ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ ಉತ್ತರ):–ಮಾನ್ಯ ಕಾರ್ಮಿಕ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶ್ರೀ ಕೆ.ರಾಮಚಂದ್ರಪ್ಪ, ಜಂಟೀ ನಿರ್ದೇಶಕರು (ಆಡಳಿತ), ಇವರು ನಕಲಿ ನೇಮಕಾತಿ ಆದೇಶಗಳಿಗೆ ಸಹಿ ಮಾಡಿರುವುದಕ್ಕೆ ಸರ್ಕಾರ ಇವರ ವಿರುದ್ಧ ಕೈಗೊಂಡಿರುವ ಕ್ರಮ

ಆ) ಸಿ.ಒ.ಡಿ.ಯು ಕಳೆದ 2 ವರ್ಷಗಳಿಂದ ತನಿಖೆ ನಡೆಸುತ್ತಿದೆಯೇ: ಹಾಗಿದ್ದಲ್ಲಿ ತನಿಖೆಯ ಪರಿಣಾಮಗಳು:

ಇ) ಆಗಿನ ಕಾರ್ಮಿಕ ಸಚಿವರು ಸದನಕ್ಕೆ ನೀಡಿದ ಭರವಸೆಯ ಹಂತ;

ಈ) ಆರೋಪಿಯು ಅದೇ ಸ್ಥಾನದಲ್ಲಿ ಮುಂದುವರೆಯಲು ಅವಕಾಶ ನೀಡಿದ್ದಲ್ಲಿ ದಾಖಲೆಗಳನ್ನು ಹಾಳು ಮಾಡುವುದು ಅಥವಾ ಸತ್ಯವನ್ನು ಮುಚ್ಚಿಡಲು ಪ್ರಭಾವ ಬೀರುವುದಿಲ್ಲವೇ?

ಶ್ರೀ ಬಿ.ಎನ್.ಬಚ್ಚೇಗೌಡ, (ಮಾನ್ಯ ಕಾರ್ಮಿಕ ಸಚಿವರು):–

ಅ) ಈ ಪ್ರಕರಣದ ವಿಷಯದಲ್ಲಿ ಸಿ.ಒ.ಡಿ.ಯು ತನಿಖೆ ನಡೆಸುತ್ತಿರುವ ಕಾರಣ ತನಿಖೆಯ ವರದಿಯನ್ನು ನಿರೀಕ್ಷಿಸಲಾಗುತ್ತಿದೆ.

ಆ) ತನಿಖೆಯು ಅಂತಿಮ ಹಂತದಲ್ಲಿದೆ.